IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# “ಯೇಸುಕ್ರಿಸ್ತರ ಚಿಂತನೆಗಳಲ್ಲಿ : ಪ್ರತಿರೋಧದ ನೆಲೆಗಳು”

**ಡಾ. ರೇಖಾ ಜೋಗುಳ,**
**ಪ್ರಾಚಾರ್ಯರು**
**ಕಿಟೆಲ್ ಕಲಾ ಮಹಾವಿದ್ಯಾಲಯ,**
**ಧಾರವಾಡ**

‘ನಿನ್ನ ನೆರೆಯವನನ್ನು ನಿನ್ನಂತೆ ಪ್ರೀತಿಸು’ ಈ ವಾಕ್ಯ ಕೇಳದ ಜನರೇ ನಮ್ಮಲ್ಲಿ ಇಲ್ಲ. ಇಂದಿಗೂ ವಿಶ್ವದಲ್ಲಿ ಸಾಂಸ್ಕೃತಿಕ ಜಗತ್ತನ್ನು ಆಧ್ಯಾತ್ಮಿಕ, ಭಾವನಾತ್ಮಕ ಮಾನಸಿಕಸ್ಪಂದನದಿಂದ ಆಳುತ್ತಿರುವ ಕೆಲವೇ ಬೆರಳೆಣಿಕೆಯ ಸಂತರಲ್ಲಿ ಯೇಸುಕ್ರಿಸ್ತರು ಒಬ್ಬರಾಗಿದ್ದಾರೆ. ಭಾವನಾತ್ಮಕ – ಮಾನಸಿಕ ಕೇಂದ್ರಿಕರಣದಿಂದ ನೈತಿಕ ಮಟ್ಟದಲ್ಲಿ, ಸಾಮಾಜಿಕ ಸ್ತರದಲ್ಲಿ, ಸಾಂಸ್ಕೃತಿಕ ಸುಸ್ಥಿರತೆಯಲ್ಲಿ ಬದಲಾವಣೆಯನ್ನು ಬಯಸಿದವರು, ಬದಲಾವಣೆ ತಂದವರು ಹಾಗೂ ಇಂದಿಗೂ ಬದಲಾವಣೆಯನ್ನು ಉಂಟು ಮಾಡುತ್ತಿರುವವರು.

ಯಾವುದೇ ವಿಷಯದ ಕುರಿತು ಮಾತನಾಡಿದಾಗ ಅದು ಅಭಿವ್ಯಕ್ತಿಯಾಗುವದು. ಆ ಮಾತಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದಾಗ ಅದು ಅಭಿಪ್ರಾಯವಾಗುವದು. ಅಭಿಪ್ರಾಯಕ್ಕೆ ಪ್ರತಿರೋಧನ ಒಡ್ಡಿದಾಗ ಚಿಂತನೆ ಹೊರಹೊಮ್ಮುವದು. ಇದನ್ನೇ ಸರಳೀಕರಿಸಿ ಹೇಳುವುದಾದರೆ

**ಅಭಿವ್ಯಕ್ತಿ ⟹ ಪ್ರತಿಕ್ರಿಯೆ ⟹ ಪ್ರತಿರೋಧನ**
**ಮಾತು ⟹ ಅಭಿಪ್ರಾಯ ⟹ ಚಿಂತನೆ**

ಮಾತು, ಅಭಿಪ್ರಾಯಗಳು ಅಲ್ಪಾಯುಷಿಗಳು. ಆದರೆ, ಚಿಂತನೆ ಶಾಶ್ವತ ಹಾಗೂ ಸಾರ್ವಕಾಲಿಕ ಸತ್ಯಗಳು. ಇಂತಹ ಚಿಂತನಾ ಪುರುಷರಾದ ಯೇಸುಕ್ರಿಸ್ತರ ಚಿಂತನೆಗಳನ್ನು ಪ್ರಸ್ತುತ ಸಂದರ್ಭದಲ್ಲಿ, ಅಂದಿನ ಪರಿಸರಕ್ಕೂ ಅನ್ವಯಿಸಿಕೊಂಡು ಮತ್ತೆ ಮತ್ತೆ ಅವಲೋಕಿಸಿದಾಗ, ಅಲ್ಲಿರುವ ಚಿಂತನೆಯ ಹೊಳಹುಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದಾಗ ಅವರ ಪ್ರತಿರೋಧನ ನೆಲೆಗಳು ನಮಗೆ ಅರ್ಥವಾಗಲು ಸಾಧ್ಯವಾಗುತ್ತದೆ. ಅಂತಹ ಚಿಕ್ಕ ಪ್ರಯತ್ನವೇ ಈ ಲೇಖನದ ಮುಖ್ಯವಾದ ಉದ್ದೇಶ.

ಸಂತ, ಬೋಧಕರಾದ ಯೇಸುಕ್ರಿಸ್ತರ ಚಿಂತನಾ ನಿಲುವುಗಳನ್ನು ನಾವು ಮುಖ್ಯವಾಗಿ ನಾಲ್ಕು ನೆಲೆಗಳಾಗಿ ವಿಂಗಡಿಸಬಹುದು.

## ಯೇಸುಕ್ರಿಸ್ತರ ಚಿಂತನೆಗಳು

**ವೈಯಕ್ತಿಕ ನೆಲೆ** **ನೈತಿಕನೆಲೆ**

**ಸಾಮಾಜಿಕ ನೆಲೆ** **ಸಾಂಸ್ಕೃತಿಕ ನೆಲೆ**

ಅವರು ಹೇಳಿದ ದೃಷ್ಟಾಂತಗಳು, ಪರ್ವತ ಪ್ರಸಂಗ, ಶಿಷ್ಯರ ಜೊತೆಗಿನ ಮಾತುಗಳು, ಇತರರೊಡಗಿನ ಬಾಂಧವ್ಯತೆ, ನೀಡಿದ ಉಪದೇಶಗಳು ಇವೆಲ್ಲವುಗಳ ಆಧಾರದಿಂದ ಅವರ ಚಿಂತನೆಗಳಲ್ಲಿರುವ ಪ್ರತಿರೋಧನ ನೆಲೆಗಳನ್ನು ಗುರುತಿಸಬಹುದಾಗಿದೆ.

**I) ವೈಯಕ್ತಿಕ ನೆಲೆ :** ಫರಿಸಾಯರು, ಮಹಾಯಾಜಕರು, ಶಾಸ್ತ್ರಿಗಳು ಹಾಗೂ ಸದ್ದುಕಾಯರು ಯೇಸುಕ್ರಿಸ್ತರನ್ನು, ಅವರ ನಡೆ–ನುಡಿಗಳನ್ನು ಪ್ರಶ್ನಿಸುತ್ತಿದ್ದರು ಆಗ ವೈಯಕ್ತಿಕ ನೆಲೆಯಲ್ಲಿ ಅವರು ಕೊಡುವ ಉತ್ತರಗಳು ಅವರನ್ನು ಪ್ರಶ್ನಿಸುವವರಿಗೆ, ಮೂಲಭೂತವಾದಿಗಳಿಗೆ ಪ್ರತಿರೋಧನ ಚಿಂತನೆಗಳಾಗಿವೆ.

* ಸುಂಕದ ಮತ್ತಾಯನ ಮನೆಯಲ್ಲಿ ಯೇಸುಕ್ರಿಸ್ತರು ಊಟ ಮಾಡಿದಾಗ ಸುಂಕದ ಮತ್ತಾಯ ಪಾಪಿ ಅವನ ಜೊತೆ ಸಹ ಭೋಜನ ಏಕೆ? ಎಂದಾಗ "ಕ್ಷೇಮದಿಂದಿರುವವರಿಗೆ ವೈದ್ಯನುಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು" (ಮತ್ತಾಯನು ಬರೆದ ಸುವಾರ್ತೆ 9ನೇ ಸಂಧಿ 12ನೇ ವಚನ) ಯೇಸುಕ್ರಿಸ್ತರ ಈ ಉತ್ತರ ಪ್ರಶ್ನಿಸಿದವರ ಮನಸ್ಸಿಗೆ ಹಿಡಿದ ಕೈಗನ್ನಡಿಯಾಗಿದೆ.

* ಶಿಷ್ಯರಿಗೆ ನೀಡಿದ ಅಪ್ಪಣೆ ಹಾಗೂ ಕರ್ತವ್ಯ : "ಉಚಿತವಾಗಿ ಹೊಂದಿದ್ದೀರಿ. ಉಚಿತವಾಗಿ ಕೊಡಿರಿ. ನಿಮ್ಮ ಹಮ್ಮೀಣಿಗಳಲ್ಲಿ ಹೊನ್ನು, ಹಣ, ದುಡ್ಡುಗಳನ್ನು ದಾರಿಗೆ ಹಸಿಬೆಯನ್ನು ಎರಡು ಅಂಗಿ ಕೆರಕೋಲು ಮೊದಲಾದವುಗಳನ್ನು ಸೌರಿಸಿಕೊಳ್ಳಬೇಡಿರಿ" (ಮತ್ತಾಯ 10:9–10) ಶಿಷ್ಯರಿಗೆ ನೀಡಿದ ಕಟ್ಟಪ್ಪಣೆ ಹಾಗೂ ಸೇವೆ ಮಾಡುವುದಕ್ಕೆ ಕಳುಹಿಸಿದ ಸಂದರ್ಭದಲ್ಲಿ ಅವರ ಮನಸ್ಸನ್ನು ತಮ್ಮ ಚಿಂತನೆಯತ್ತ ನಡೆಸಿದ ರೀತಿ ಇಲ್ಲಿ ಮಹತ್ವದ್ದಾಗಿದೆ.

* ಶಿಷ್ಯರ ಪಾದ ತೊಳೆದದ್ದು ಹಾಗೂ ಶಿಷ್ಯರಿಗೆ ಮಾದರಿಯಾಗಿದ್ದು : ಶಿಷ್ಯ ಗುರುವಿನ ಸೇವೆ ಮಾಡುವದನ್ನು ಒಪ್ಪಿದ ಶಿಷ್ಯ ವರ್ಗಕ್ಕೆ ತಾವೇ ಶಿಷ್ಯರ ಸೇವೆ ಮಾಡುವ ಮೂಲಕ ಅವರಲ್ಲಿ ಸೇವಾ ಮನೋಭಾವ ಮೊಳಕೆ ಒಡೆಸಿದ್ದು ಶಿಷ್ಯರಿಗೆ ತಾವೇ ಮಾದರಿಯಾಗಿ ನಿಂತರು. ಪ್ರೀತಿಯ ಶಿಷ್ಯ ಪೇತ್ರ ನನ್ನ ಕಾಲನ್ನು ತೊಳೆಯಬಾರದು ಎಂದು ಹೇಳಿದಕ್ಕೆ ಯೇಸುಕ್ರಿಸ್ತರು " ನಾನು ನಿನ್ನನ್ನು ತೊಳೆಯದಿದ್ದರೆ ನನ್ನ ಸಂಗಡ ನಿನಗೆ ಪಾಲಿಲ್ಲ" (ಯೋಹಾನ 13:8) ಮುಂದುವರೆದು " ನೀವು ನನ್ನನ್ನು ಗುರುವೆಂದೂ ಕರ್ತನೆಂದೂ ಕರೆಯುತ್ತೀರಿ. ನೀವು ಕರೆಯುವುದು ಸರಿ ; ನಾನು ಅಂಥವನೇ ಹೌದು. ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿರಲಾಗಿ ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆಯುವ ಹಂಗಿನವರಾಗಿದ್ದೀರಿ" (ಯೋಹಾನ 13:13–14) ಕಾಲನ್ನು ನಮಸ್ಕರಿಸುವುದಕ್ಕೆ ಹಿಂದು–ಮುಂದು ಯೋಚಿಸುವ ಮನಸ್ಸುಗಳಿಗೆ ಕಾಲು ತೊಳೆಯುವ ಹೊಸ ಜವಾಬ್ದಾರಿಯನ್ನು ನೀಡಿರುವರು.

* ಶಿಲುಬೆಯ ಮೇಲಿನ ಸಪ್ತವಾಕ್ಯದಿಂದ ಜಗತ್ತಿಗೆ ಮಾದರಿಯಾಗಿದ್ದಾರೆ : ಎಲ್ಲರೂ ಅವರನ್ನು ದೂಷಿಸಿ ಶಿಲುಬೆಗೆ ಹಾಕಿ ನೆರೆದವರು ಹಾಸ್ಯ ಮಾಡಿದಾಗ ಯೇಸುಕ್ರಿಸ್ತರ ಪ್ರಾರ್ಥನೆ "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" (ಲೂಕ 23:34) ಎಲ್ಲರನ್ನು ಕ್ಷಮಿಸಿ ಮಹಾ ಮಾನವತಾವಾದಿ ಎನಿಸಿದರು. ಕ್ಷಮೆ ನೀಡುವ ಮೂಲಕ ಉತ್ತುಂಗ ಪುರುಷರಾದರು.

**II) ನೈತಿಕ ನೆಲೆಗಳು :** ನೈತಿಕ ಅಂಶಗಳು ಮನುಷ್ಯನ ಮನೋವಿಕಾಸವನ್ನು ಬೆಳಗಿಸಿದರೆ ಅದರ ಜೊತೆ ಜೊತೆಯಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನುಂಟು ಮಾಡುತ್ತವೆ. ನೈತಿಕವಾದ ಅನೇಕ ಮೌಲ್ಯಗಳಿಗೆ ಹೊಸ ವ್ಯಾಖ್ಯಾನವನ್ನು ಯೇಸು ಕ್ರಿಸ್ತರು ಬರೆದಿರುವರು. ಅಂದಿನ ಮೂಲ, ಜಡವಾದಿಗಳಿಗೆ ಅವುಗಳು ಪ್ರತಿರೋಧಗಳಾಗಿದ್ದವು.

* ಸಹೋದರ ಪ್ರೀತಿ : "ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ ಎಂಬುದು ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು ಆ ಯಜ್ಞ ವೇದಿಯ ಮುಂದೆಯೇ ಬಿಟ್ಟು ಹೋಗಿ ಮೊದಲು ನಿನ್ನ ಸಹೋದರ ಸಂಗಡ ಒಂದಾಗು ; ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು" (ಮತ್ತಾಯ 5:23–24) ದೇವರಿಗೆ ಕಾಣಿಕೆ ಅರ್ಪಿಸುವುದಕ್ಕಿಂತ ಸಹೋದರ ಜೊತೆಗಿನ ಅನ್ಯೋನ್ಯತೆ, ಪ್ರೀತಿ ಮುಖ್ಯವಾಗಿದೆ ದ್ವೇಷ ಮರೆತನಂತರ, ಸಹೋದರ ಜೊತೆ ಒಂದಾದ ನಂತರ ದೇವರಿಗೆ ಕಾಣಿಕೆ ಅರ್ಪಣೆಗೆ ಕರೆ ನೀಡಿರುವರು.

* ವ್ಯಭಿಚಾರ : "ಪರಸ್ತ್ರೀಯನ್ನು ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು" (ಮತ್ತಾಯ 5:28) ಮನಸ್ಸಲ್ಲಿ ಮೋಹಭಾವ ವ್ಯಕ್ತವಾದರೂ ಅದು ವ್ಯಭಿಚಾರ ಎಂದು ಎಚ್ಚರಿಸಿರುವರು.

* ವಿಚ್ಛೇದನ : "ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಅವಳು ವ್ಯಭಿಚಾರ ಮಾಡುವುದಕ್ಕೆ ಕಾರಣನಾಗುತ್ತಾನೆ" (ಮತ್ತಾಯ 5:32) ವಿಚ್ಛೇದನಗಳು ಹೆಚ್ಚಾಗುತ್ತಿರುವ ಇಂದಿನ ದಿನಕ್ಕೂ ಮೇಲಿನ ಕಾರಣ ಅರಿಯಬೇಕಾದ ಅತ್ಯಗತ್ಯತೆ ಇದೆ.

* ಆಣೆ ಇಡಬೇಡ : "ಆಣೆಯನ್ನೇ ಇಡಬೇಡ. ಆಕಾಶದ ಮೇಲೆ ಆಣೆ ಇಡಬೇಡ; ಅದು ದೇವರ ಸಿಂಹಾಸನವು. ಭೂಮಿಯ ಮೇಲೆ ಆಣೆ ಇಡಬೇಡ; ಅದು ಆತನ ಪಾದಪೀಠವು. . . . . . ನಿನ್ನ ತಲೆಯ ಮೇಲೆ ಕೂಡ ಆಣೆ ಇಡಬೇಡ" (ಮತ್ತಾಯ 5:34–35) ಮನುಷ್ಯನಿಗೆ ಆಣೆ ಮಾಡುವ ಯಾವ ಅಧಿಕಾರವೂ ಇಲ್ಲ.

* ಮಾತು : "ನಿಮ್ಮ ಮಾತು ಹೌದಾದರೆ ಹೌದು; ಅಲ್ಲವಾದರೆ ಅಲ್ಲ ಎಂದಿರಲಿ" (ಮತ್ತಾಯ 5:37) ಮಾತಿನ ಸ್ಪಷ್ಟತೆ, ಅಸ್ಪಷ್ಟತೆಯ ಅರಿವು ಇರಬೇಕು.

* ಬಲಗನ್ನೆ ಹೊಡೆದರೆ ಎಡಗೆನ್ನೆ ನೀಡು : "ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು" (ಮತ್ತಾಯ 5:39) ದ್ವೇಷಕ್ಕೆ–ದ್ವೇಷವಲ್ಲ. ಹೊಡೆದವನಿಗೆ ತನ್ನ ತಪ್ಪಿನ ಅರಿವು ಮಾಡಿಸಿದವರು.

* ವೈರಿಯನ್ನು ಪ್ರೀತಿಸಿ ಹಾಗೂ ಹಿಂಸಿಸುವವರಿಗಾಗಿ ಪ್ರಾರ್ಥಿಸಿ : " ನಿಮ್ಮ ವೈರಿಗಳನ್ನು ಪ್ರೀತಿಸಿರಿ ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ಪ್ರಾರ್ಥಿಸಿರಿ" (ಮತ್ತಾಯ 5:44) ಪ್ರೀತಿ ಹಾಗೂ ಪ್ರಾರ್ಥನೆ ಯಾರಿಗಾಗಿರಬೇಕು ಎಂದು ಸಾರಿದರು.

* ದಾನ–ಧರ್ಮದ ರೀತಿ : "ನೀನಾದರೆ ಧರ್ಮ ಕೊಡುವಾಗ ನೀನು ಧರ್ಮ ಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ" (ಮತ್ತಾಯ 6:3) ಗುಪ್ತದಾನ ಪ್ರತಿಪಾದನೆಯನ್ನು ಮಾಡಿರುವರು.

* ಪ್ರಾರ್ಥನೆ ಯಾವ ರೀತಿಯಾಗಿ ಮಾಡಬೇಕು : ಕಪಟಿಗಳ ಹಾಗೆ ಪ್ರಾರ್ಥನೆ ಮಾಡದೇ "ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು" (ಮತ್ತಾಯ 6:6)

* ಪ್ರಾರ್ಥನಾ ಮಾದರಿ :

"ಪರಲೋಕದಲ್ಲಿರುವ ನಮ್ಮ ತಂದೆಯೇ,
ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ,
ನಿನ್ನ ರಾಜ್ಯವು ಬರಲಿ,
ನಿನ್ನ ಚಿತ್ತವು ಪರಲೋಕದಲ್ಲಿ ನೇರವೇರುವ ಪ್ರಕಾರ
ಭೂಲೋಕದಲ್ಲಿಯೂ ನೇರವೇರಲಿ
ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ದಯಪಾಲಿಸು
ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ
ನಮ್ಮ ತಪ್ಪುಗಳನ್ನು ಕ್ಷಮಿಸು
ನಮ್ಮನ್ನು ಶೋಧನೆಯೊಳಗೆ ಸೇರಿಸದೆ
ಕೇಡಿನಿಂದ ನಮ್ಮನ್ನು ತಪ್ಪಿಸು
ಯಾಕಂದರೆ ರಾಜ್ಯವು ಬಲವು ಮಹಿಮೆಯೂ
ಸದಾಕಾಲ ನಿನ್ನವೇ **ಆಮೇನ್"** (ಮತ್ತಾಯ 6:10–13)

ದೇವರಿಗೆ ಸ್ತೋತ್ರ, ದಿನನಿತ್ಯದ ಆಹಾರಕ್ಕಾಗಿ ಬೇಡಿಕೆ, ನಾವು ಇತರರನ್ನು ಕ್ಷಮಿಸಿದಂತೆ ನಮ್ಮನ್ನು ನೀನು ಕ್ಷಮಿಸು ಹಾಗೂ ಶೋಧನೆಯ ಕೇಡಿನಿಂದ ಪಾರು ಮಾಡಲು ದೇವರಿಗೆ ಮೊರೆ. ಅಂತರಂಗವನ್ನೇ ತೆರೆದಿಡುವ ಪ್ರಾರ್ಥನೆಯಾಗಿದೆ.

* ಉಪವಾಸ : "ನೀವು ಉಪವಾಸ ಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. . . . . . . . . ಉಪವಾಸ ಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳಕೋ ಹೀಗೆ ಮಾಡಿದರೆ ನೀನು ಉಪವಾಸಿಯೆಂದು ಜನರಿಗೆ ಕಾಣದೆ ಹೋದಾಗ್ಯು ಅಂತರಂಗದಲ್ಲಿರುವ ನಿನ್ನ ತಂದೆಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ" (ಮತ್ತಾಯ 6:16–18) ನಿಮ್ಮ ಉಪವಾಸ ಅಂತರಂಗದಲ್ಲಿರುವ ತಂದೆಗೆ ಮಾತ್ರ ಗೋಚರವಾಗಬೇಕೇ ಹೊರತು ಇತರರಿಗೆ ಅಲ್ಲ.

* ದೇವರು ಹಾಗೂ ಧನ : "ಯಾವನು ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು. ನೀವು ದೇವರನ್ನು ಧನವನ್ನು ಕೂಡ ಸೇವಿಸಲಾರಿರಿ." (ಮತ್ತಾಯ 6:24) ಏಕಕಾಲಕ್ಕೆ ಇಬ್ಬರು ಯಜಮಾನರ ಸೇವೆ ಎಷ್ಟು ಕಷ್ಟ, ಅದೇ ರೀತಿ ದೇವರು ಧನ ಎರಡನ್ನು ಒಮ್ಮೆಲೇ ಪಡೆಯಲಾರರು, ಅನುಭವಿಸಲಾರರು.

* ಪ್ರಾಣ ಹಾಗೂ ದೇಹ : "ನಮ್ಮ ಪ್ರಾಣಧಾರಣೆಗೆ ಏನು ಊಟ ಮಾಡಬೇಕು, ಏನು ಕುಡಿಯಬೇಕು, ನಮ್ಮ ದೇಹ ರಕ್ಷಣೆಗೆ ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ ಎಂಬುದಾಗಿ ನಿಮಗೆ ಹೇಳುತ್ತೇನೆ. ಊಟಕ್ಕಿಂತ ಪ್ರಾಣವು ಉಡುಪಿಗಿಂತ ದೇಹವು ಮೇಲಾದದ್ದಲ್ಲವೇ" (ಮತ್ತಾಯ6:25) ಪ್ರಾಣ, ದೇಹ ಮುಖ್ಯವೆಂದೆನಿಸದೇ ಊಟ, ಬಟ್ಟೆಗೆ ಪ್ರಾಮುಖ್ಯತೆ ನೀಡುವವರ ವ್ಯರ್ಥ ಚಿಂತೆಗಳನ್ನು ಖಂಡಿಸಿದ್ದಾರೆ.

* ಮಾತೇ ನೀತಿವಂತ ಅಥವಾ ಅಪರಾಧಿ ಎಂದು ಹೇಳುವವು : "ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ" (ಮತ್ತಾಯ 12:37) ಮುಂದುವರೆದು "ಬಾಯೊಳಕ್ಕೆ ಹೋಗುವಂಥದು ಮನುಷ್ಯನನ್ನು ಹೊಲೆ ಮಾಡುವುದಿಲ್ಲ; ಬಾಯೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆ ಮಾಡುವದು" (ಮತ್ತಾಯ 15:11) "ಬಾಯೊಳಕ್ಕೆ ಹೋಗುವಂಥದು ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುತ್ತದೆ ಎಂದು ನಿಮಗೆ ತಿಳಿಯಲಿಲ್ಲವೋ? ಆದರೆ, ಬಾಯೊಳಗಿಂದ ಹೊರಡುವಂಥವುಗಳು ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ ಕೊಲೆ, ಹಾದರ, ಸೂಳೆಗಾರಿಕೆ, ಕಳ್ಳತನ ಸುಳ್ಳುಸಾಕ್ಷಿ ಬೈಗಳು ಹೊರಟು ಬರುತ್ತವೆ ಮನುಷ್ಯನನ್ನು ಕೆಡಿಸುವಂಥವುಗಳು ಇವೆ" (ಮತ್ತಾಯ 15:16–20) ಮನಸ್ಸಿನಿಂದ ಹೊರಬರುವ ಕೆಟ್ಟ ಆಲೋಚನೆಗಳು ಮನುಷ್ಯನನ್ನೇ ಹೊಲೆ ಮಾಡುತ್ತವೆ.

* ನಂಬಿಕೆ : "ಸಾಸಿವೇ ಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ – ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದು ಇರುವುದಿಲ್ಲ". (ಮತ್ತಾಯ 17:20) ನಂಬಿಕೆ ಹೇಗಿರಬೇಕು. ನಂಬಿಕೆ ಇದ್ದಾಗ ಎಲ್ಲ ಯಶಸ್ಸು ಸಾಧ್ಯ.

* ಪರಲೋಕರಾಜ್ಯ ಸೇರುವವರು : " ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆನೀವು ಪರಲೋಕ ರಾಜ್ಯದಲ್ಲಿ ಸೇರುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ( ಮತ್ತಾಯ 18:3) ಮಕ್ಕಳ ಮುಗ್ಧ ಮನಸ್ಸು, ಕಪಟ ರಹಿತ ಹೃದಯ ಪರಲೋಕ ರಾಜ್ಯಕ್ಕೆ ಭಾಜನರಾಗುವರು.

* ಕ್ಷಮೆ ಎಷ್ಟು ಸಲ : "ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ" (ಮತ್ತಾಯ 18:17) ಕ್ಷಮೆಯ ಅಗಾಧತೆ ಎತ್ತಿ ಹೇಳಿರುವರು.

* ಗಂಡ–ಹೆಂಡತಿ : "ಅವರು ಇನ್ನು ಇಬ್ಬರಲ್ಲ ; ಒಂದೇ ಶರೀರವಾಗಿದ್ದಾರೆ" (ಮತ್ತಾಯ 19:6) ಮದುವೆ ನಂತರ ಅವರಿಬ್ಬರೂ ಒಂದೇ ಶರೀರವಾಗಿದ್ದಾರೆ.

* ಐಶ್ವರ್ಯವಂತ ಪರಲೋಕ ರಾಜ್ಯ ಸೇರುವದು ಕಷ್ಟ : "ಐಶ್ವರ್ಯವಂತನು ಪರಲೋಕರಾಜ್ಯದಲ್ಲಿ ಸೇರುವದು ಕಷ್ಟ. ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವದು ಸುಲಭ" (ಮತ್ತಾಯ 19:23–24) ಐಶ್ವರ್ಯವಂತ ದೇವರ ಕೃಪೆಗೆ ಪಾತ್ರನಾಗುವದು ಕಷ್ಟಕರವಾಗಿದೆ.

* ಎಲ್ಲಾ ಧರ್ಮಶಾಸ್ತ್ರ, ಪ್ರವಾದನ ಗ್ರಂಥಕ್ಕೂ ಆಧಾರವಾದ ಎರಡು ಆಜ್ಞೆಗಳು : "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು. ಅದು ಯಾವದೆಂದರೆ – ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ" (ಮತ್ತಾಯ 22:37–39) ಎರಡು ಆಜ್ಞೆಗಳು ದೇವನ ಮೇಲಿನ ಭಕ್ತಿ ಹಾಗೂ ಮನುಷ್ಯ ಕುಲದ ಪ್ರೀತಿಯನ್ನು ಸಾರುವವು.

**III) ಸಾಮಾಜಿಕನೆಲೆ** : ಸಮಾಜದ ಅಂಕುಡೊಂಕುಗಳನ್ನು ಎತ್ತಿ ತೋರಿಸುತ್ತ ಅವರಿಗೆ ತಮ್ಮ ಚಿಂತನೆಯ ಮೂಲಕ ಹೊಸ ಬೆಳಕನ್ನು ನೀಡಿದರು. ಜಡತ್ವವಾದಗಳೇ ನಿಜವೆಂದು ನಂಬಿದಾಗ ತಮ್ಮ ಪ್ರತಿರೋಧನವನ್ನು ವ್ಯಕ್ತಪಡಿಸಿದರು.

* ಚಿಕ್ಕವರಾರು–ದೊಡ್ಡವರಾರು : "ಸಣ್ಣ ಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು. ಆದರೆ ತಾವೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯಬೇಕೆಂದು ಬೋಧಿಸುವವರು ಪರಲೋಕರಾಜ್ಯದಲ್ಲಿ ದೊಡ್ಡವನೆನಿಸಿಕೊಳ್ಳುವನು" (ಮತ್ತಾಯ 5:19) ಆಜ್ಞೆಯಂತೆ ನಡೆದು ಬೋಧಿಸುವವರು ಮಾತ್ರ ಪರಲೋಕದಲ್ಲಿಯೂ ದೊಡ್ಡವರೆನಿಸಿಕೊಳ್ಳುವರು.

* "ನೀವು ಭೂಮಿಗೆ ಉಪ್ಪಾಗಿದ್ದೀರಿ. ಉಪ್ಪು ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ರುಚಿ ಬಂದೀತು? (ಮತ್ತಾಯ 5:13) ಎಂದು ಜನರ ಅಂತಶಕ್ತಿಯನ್ನು ಗುರುತಿಸಿ ಹೇಳಿದ ಯೇಸುಕ್ರಿಸ್ತರು "ಆತ್ಮದಲ್ಲಿ ಬಡವರಾಗಿರುವವರು ಧನ್ಯರು; ಪರಲೋಕರಾಜ್ಯ ಅವರದು, ದುಃಖಪಡುವವರು ಧನ್ಯರು; ಅವರು ಸಮಾಧಾನ ಹೊಂದುವರು. ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು. ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆತೃಪ್ತಿಯಾಗುವದು. ನಿರ್ಮಲ ಚಿತ್ತರು ಧನ್ಯರು; ಅವರು ದೇವರನ್ನು ನೋಡುವರು" ಎಂದು ಯಾವ ಯಾವ ಸ್ವಭಾವದ ಜನರು ಧನ್ಯರು ಎಂಬುದನ್ನು ಹೇಳಿರುವರು.

* ಸುಳ್ಳು ಪ್ರವಾದಿಗಳ ಕುರಿತು ಎಚ್ಚರ : "ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ ಅವರು ಕುರಿವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ. ಅದರೆ ಒಳಗೆ ನೋಡಿದರೆ ಅವರು ಹಿಡುಕೊಂಡು ಹೋಗುವ ತೋಳಗಳೇ" (ಮತ್ತಾಯ 7:15) ಎಂದು ಸುಳ್ಳು ಪ್ರವಾದಿಗಳನ್ನು ನಂಬದಂತೆ ಎಚ್ಚರಿಕೆ ನೀಡುವರು.

* ದೇವರಾಜ್ಞೆಗಳು : "ನರಹತ್ಯ ಮಾಡಬಾರದು ; ವ್ಯಭಿಚಾರ ಮಾಡಬಾರದು; ಕದಿಯಬಾರದು, ಸುಳ್ಳುಸಾಕ್ಷಿ ಹೇಳಬಾರದು ನಿನ್ನ ತಂದೆ–ತಾಯಿಗಳನ್ನು ಸನ್ಮಾನಿಸಬೇಕು ಮತ್ತು ನಿನ್ನ ಹಾಗೆಯೇ ನಿನ್ನ ನೆರೆಯವನನ್ನು ಪ್ರೀತಿ ಮಾಡಬೇಕು" (ಮತ್ತಾಯ 19:18–19) ಸಾಮಾಜಿಕ ಮೌಲ್ಯಗಳನ್ನೇ ಹೇಳಿರುವರು.

* ದೇವಾಲಯದಲ್ಲಿ ಮಾರುವ–ಕೊಳ್ಳುವ ಜನರನ್ನು ಹೊರಡಿಸಿದ್ದು : "ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವದು ಎಂದು ಬರೆದದೆ; ಆದರೆ ನೀವು ಅದನ್ನು ಕಳ್ಳರ ಗವಿ ಮಾಡುತ್ತೀರಿ" (ಮತ್ತಾಯ 21:13) ಪ್ರಾರ್ಥನಾಲಯ ವ್ಯಾಪಾರಿ ಕೇಂದ್ರ ಮಾಡಿಕೊಂಡು ಅದರ ಒಳಾಂಗಣದಲ್ಲಿ ಎಲ್ಲರೂ ವ್ಯವಹರಿಸುವಾಗ ಸಾತ್ವಿಕ ಗದರುವಿಕೆ ಇದೆ.

* ಕಪಟತನದ ಖಂಡನೆ : "ಅಯ್ಯೋ ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ ನೀವು ಸುಣ್ಣಾ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದೀರಿ; ಇವು ಹೊರಗೆ ಚಂದವಾಗಿ ಕಾಣುತ್ತವೆ. ಒಳಗೆ ನೋಡಿದರೆ ಸತ್ತವರ ಎಲುಬುಗಳಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತವೆ. ಹಾಗೆಯೇ ನೀವು ಸಹ ಹೊರಗೆ ಜನರಿಗೆ ಸತ್ಪುರುಷರಂತೆ ಕಾಣಿಸಿಕೊಳ್ಳುತ್ತೀರಿ ಸರಿ. ಆದರೆ, ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದವರಾಗಿದ್ದೀರಿ" (ಮತ್ತಾಯ 23:27–28) ಸಾಮಾಜಿಕ ಜವಾಬ್ದಾರಿ ಮರೆತವರನ್ನು ಸಮಾಧಿಗೆ ಹೋಲಿಸಿರುವರು.

* ಕತ್ತಿಯನ್ನು ಹಿಡಿದವರು ಕತ್ತಿಯಿಂದ ಸಾಯುವರು : ಯೂದನು ಯೇಸುವನ್ನು ಹಿಡಿದುಕೊಟ್ಟಾಗ ಯೇಸುವಿನ ಸಂಗಡವಿದ್ದವರಲ್ಲಿ ಒಬ್ಬ ಹಿರಿಯ ಮಹಾಯಾಜಕನ ಆಳನ್ನು ಹೊಡೆದು ಕಿವಿ ಕಡಿದು ಹಾಕಿದಾಗ ಯೇಸುಕ್ರಿಸ್ತರು "ನಿನ್ನ ಕತ್ತಿಯನ್ನು ತಿರುಗಿ ಒರೆಯಲ್ಲಿ ಸೇರಿಸು; ಕತ್ತಿಯನ್ನು ಹಿಡಿದವರೆಲ್ಲ ಕತ್ತಿಯಿಂದ ಸಾಯುವರು" (ಮತ್ತಾಯ 26:52) ಕತ್ತಿ ಹಿಡಿಯುವದನ್ನು ಖಂಡಿಸುವವರು. ಕತ್ತಿಯನ್ನು ಹಿಡಿದವರು ಕತ್ತಿಯಿಂದ ಸಾಯುವರು ಎಂದು ಹೇಳಿದ್ದಾರೆ.

* ವ್ಯಭಿಚಾರಿಣಿಯ ಕುರಿತು ತೀರ್ಪು: ಶಾಸ್ತ್ರಿಗಳು, ಫರಿಸಾಯರು ವ್ಯಭಿಚಾರದಲ್ಲಿ ಸಿಕ್ಕಿದ ಒಬ್ಬ ಹೆಂಗಸನ್ನು ಯೇಸು ಕ್ರಿಸ್ತರ ಬಳಿಗೆ ಕರೆತಂದು ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯ ಧರ್ಮಶಾಸ್ತ್ರದಲ್ಲಿ ಅಪ್ಪಣೆ ಕೊಟ್ಟಿದ್ದಾನೆ. ನೀನು ಏನು ಹೇಳುತ್ತಿ ಎಂದು ಯೇಸುಕ್ರಿಸ್ತರನ್ನು ಕೇಳಿದಾಗ ಅವರು "ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲು ಹಾಕಲಿ" (ಯೋಹಾನ 8:7) ಆಗ ಶಾಸ್ತ್ರಿಗಳು, ಫರಿಸಾಯರ ಮೊದಲಗೊಂಡು ಅಲ್ಲಿದ್ದವರೆಲ್ಲ ತಾವೇ ಪಾಪಿಗಳೆಂದು ತಿಳಿದು ಅಲ್ಲಿಂದ ತೆರಳಿದರು. ಹೀಗೆ ಯೇಸುಕ್ರಿಸ್ತರು ಸಮಾಜದಲ್ಲಿನ ಕತ್ತಲನ್ನು ತಮ್ಮ ಉಪದೇಶದಿಂದ ಎತ್ತಿತೋರಿಸಿರುವರು.

**IV) ಸಾಂಸ್ಕೃತಿಕ ನೆಲೆಗಳು :** ಸಾಂಸ್ಕೃತಿಕವಲಯದಲ್ಲಿ ಶಿಥಿಲತೆಗಳು ಕಂಡು ಬಂದಾಗ ಯೇಸುಕ್ರಿಸ್ತರು ಅದರ ವಿರುದ್ಧ ಧ್ವನಿ ಎತ್ತುವ ಮೂಲಕ ಸಾಂಸ್ಕೃತಿಕ ನೆಲೆಗಳಲ್ಲಿಯೂ ಪ್ರತಿರೋಧನವನ್ನುಂಟು ಮಾಡಿದರು. ನಾವು ಕೆಲವು ಉದಾಹರಣೆಗಳಿಂದ ನೋಡಬಹುದು.

* ದೀಕ್ಷಾಸ್ನಾನ : ಯೇಸುಕ್ರಿಸ್ತರು ಯೋಹಾನನ ಬಳಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು ಎಂದು ಹೇಳಿ ಯೇಸುಕ್ರಿಸ್ತರನ್ನು ತಡೆದಾಗ " ಒಪ್ಪಿಕೋ ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕಾಗಿದೆ" (ಮತ್ತಾಯ 3:13) ಎಂದು ಹೇಳಿ ಒಪ್ಪಿಸಿ ದೀಕ್ಷಾಸ್ನಾನ ಹೊಂದಿದರು.

* ಶೋಧಕನ ಜೊತೆಗಿನ ಮಾತುಗಳು : ಶೋಧಕ (ಸೈತಾನ) ಆಶೆ–ಆಕಾಂಕ್ಷೆಗಳನ್ನು ತೋರಿಸಿದಾಗಲೂ ಸಂಸ್ಕೃತಿಯನ್ನು ಮೀರದೆ ಹೋದ ಉದಾಹರಣೆಗಳನ್ನು ಕಾಣುತ್ತೇವೆ.

* ಕಲ್ಲನ್ನು ರೊಟ್ಟಿ ಮಾಡಲು ನಿರಾಕರಣೆ : "ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವುದಿಲ್ಲ. ದೇವರ ಬಾಯಿಂದ ಹೊರಡುವ ಮಾತಿನಿಂದ ಬದುಕುವನು" (ಮತ್ತಾಯ 4:4).

* ನೀನು ದೇವರ ಮಗನಾಗಿದ್ದರೆ ಮೇಲಿನಿಂದ ಕೆಳಗೆ ದುಮುಕು : "ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರದು" (ಮತ್ತಾಯ 4:7)

* ಸೈತಾನ ಸಾಷ್ಟಾಂಗ ಎರಗಲು ಕೇಳಿದಾಗ : "ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು" (ಮತ್ತಾಯ 4:10) ಮೂರು ಪ್ರಸಂಗಗಳಲ್ಲಿ ಶೋಧಕನಿಗೆ ಒಳಗಾಗದೆ ನಿಂತರು.

* ಸಬ್ಬತ್ ದಿನ : ಸಬ್ಬತ್ ದಿನದಲ್ಲಿ ಯೇಸುಕ್ರಿಸ್ತರ ಶಿಷ್ಯರು ಪೈರಿನ ಹೊಲಗಳಲ್ಲಿ ಹಾದು ಹೋಗುವಾಗ ಹಸಿರು ತೆನೆಗಳನ್ನು ಮುರಿದು ತಿಂದರು ಆಗ ಫರಿಸಾಯರು 'ನಿನ್ನ ಶಿಷ್ಯರು ಸಬ್ಬತ್ ದಿನದಲ್ಲಿ ಮಾಡಬಾರದ ಕೆಲಸವನ್ನು ಮಾಡುತ್ತಾರೆ' ಎಂದು ಯೇಸುಕ್ರಿಸ್ತರಿಗೆ ಹೇಳಿದಾಗ ಅವರು ಅವರಿಗೆ "ದಾವೀದನು ತಾನು ತನ್ನ ಸಂಗಡ ಇದ್ದವರೂ ಹಸಿದಾಗ ಏನು ಮಾಡಿದನೆಂಬುದನ್ನು ನೀವು ಓದಲಿಲ್ಲವೋ. ಅವನು ದೇವರ ಮಂದಿರದೊಳಕ್ಕೆ ಹೋಗಿ ಯಾಜಕರು ಮಾತ್ರವೇ ಹೊರತು ತಾನಾಗಲಿ ತನ್ನ ಸಂಗಡ ಇದ್ದವರಾಗಲಿ ತಿನ್ನಬಾರದಾಗಿದ್ದ ನೈವೇದ್ಯ ರೊಟ್ಟಿಗಳನ್ನು ತಿಂದವನಲ್ಲವೇ" (ಮತ್ತಾಯ 12:3–4) ಎಂದು ದಾವೀದನ ದೃಷ್ಟಾಂತ ಹೇಳುವ ಮೂಲಕ ಫರಿಸಾಯರ ಬಾಯನ್ನು ಕಟ್ಟಿಹಾಕಿದರು.

* ಮುಟ್ಟುವ ಕ್ರಿಯೆ : ಫರಿಸಾಯರ, ಸದ್ದುಕಾಯರ, ಶಾಸ್ತ್ರಿಗಳ ಹಾಗೂ ಯಾಜಕರಂತವರ ಹೃದಯಗಳಲ್ಲಿ 'ಮನುಕುಲದ ಪ್ರೀತಿಯೇ' ತೀರಿಹೋದವರ ಮಧ್ಯದಲ್ಲಿ ಯೇಸುಕ್ರಿಸ್ತರು ರೋಗಿಗಳನ್ನು, ಅನಾಥರನ್ನು, ಕುರುಡರನ್ನು, ಕುಂಟರನ್ನು, ದಿಕ್ಕಿಲ್ಲದವರನ್ನು, ಭಿಕ್ಷುಕರನ್ನು, ಕುಷ್ಠರೋಗಿಗಳನ್ನು, ನಿರ್ಗತಿಕರನ್ನು ಮುಟ್ಟುವ ಮೂಲಕ ಅವರಲ್ಲಿ 'ಮನುಷ್ಯ ಸಹಜ ಪ್ರೀತಿಯ' ಸ್ಪರ್ಶ, ಸ್ಪಂದನವನ್ನು ಉಂಟು ಮಾಡಿದರು. ಮನುಷ್ಯರ ಮಧ್ಯದ ಸಾಂಸ್ಕೃತಿಕ ಅಂತರದ ಗೋಡೆಯನ್ನು ಮುರಿದುಹಾಕಿ ಅವಮಾನಿತರನ್ನು, ದುಃಖಿತರನ್ನು ಸಂತೈಸಿ ಅವರಿಗೆ 'ನಾವೆಲ್ಲರೂ ಒಂದೇ' ಎನ್ನುವುದನ್ನು ತಮ್ಮ 'ಮುಟ್ಟುವ ಕ್ರಿಯೆಯ' ಮೂಲಕ ತೋರಿಸಿದರು.

ಯೇಸುಕ್ರಿಸ್ತರ ಚಿಂತನೆ ಹಾಗೂ ಉಪದೇಶಗಳನ್ನು ಗಮನಿಸಿದಾಗ ಅಂಧತ್ವದ ಮನಸ್ಸುಗಳಿಗೆ ಬೆಳಕು ನೀಡಿದರು. ಜಡತ್ವದ ಸಾಮಾಜಿಕ ಮನಸ್ಸುಗಳಿಗೆ ಚೈತನ್ಯವನ್ನು ತುಂಬಿದರು. ನಾವಿಂದು ಮತ, ಭಾಷೆ, ಗಡಿಯಾಚೆ ನಿಂತು ಯೇಸುಕ್ರಿಸ್ತರನ್ನು, ಅವರ ಚಿಂತನೆಗಳನ್ನು ದೃಷ್ಟಿಸಿದಾಗ ಅವರು ರಾಗ–ದ್ವೇಷ–ಮೋಹ ದಾಟಿ ನಿಂತು ತಮ್ಮ ಅಂತರ್‌ಶಕ್ತಿಯಿಂದ ಹೊರಹೊಮ್ಮಿದ ಚಿಂತನೆಗಳನ್ನು ದ್ವಂದ್ವಾತೀತ, ಸಂಘರ್ಷಾತೀತರಾಗಿ ನಿಂತು ನೈತಿಕ ಮೌಲ್ಯದಲ್ಲಿ ಬಿತ್ತಿದರು. ಆ ಬಿತ್ತಿದ ಅವರ ಚಿಂತನೆಗಳು ಇಂದಿಗೂ ಜಗತ್ತಿನ ಜನರ ಬದುಕಿಗೆ ಬೆಳಕಾಗಿ ಮಾರ್ಗದರ್ಶಕವಾಗಿವೆ. ಶಿಲುಬೆಯ ಮೇಲೆ, ಮಧ್ಯಾಹ್ನದ ಬೀಸಿಲಿನ ಮಧ್ಯ,

ಮುಳ್ಳಿನ ಕಿರೀಟ ಧರಿಸಿ ರಕ್ತ ಸುರಿಸುವಾಗಲೂ ಕಣ್ಣೀನಲ್ಲಿ ಅಪಾರ ಶಾಂತಿ ತುಂಬಿಕೊಂಡು "ತಂದೆಯೇ, ಅವರಿಗೆ ಕ್ಷಮಿಸು ; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" ಎಂದು ಹೇಳಿ ಮನುಕುಲದ ಆಕ್ರಂದನ ಧ್ವನಿಯನ್ನು ಹೊರ ಹೊಮ್ಮಿಸಿ ಅದ್ಭುತ ಕರುಣಾಮಯಿ, ಸಂತಶಿರೋಮಣಿಯಾದರು. ಅವರ ಪ್ರತಿಯೊಂದು ಯೋಚನೆ, ಆಲೋಚನೆ, ಚಿಂತನೆಗಳು ಸಾರ್ವತ್ರಿಕ, ಸಾರ್ವಕಾಲಿಕ ಹಾಗೂ ಸಾರ್ವಜನಿಕವಾದವು. ಅವರು ಲೋಕದಾಚೆ, ಗಗನದಾಚೆಗೆ ನಿಂತು ಮಾತನಾಡಿದಾಗ ಮಾತ್ರ ಎಲ್ಲರಿಂದ ಸಂತರಾಗಿ ಸ್ವೀಕೃತರಾದರು. ಕೌಟುಂಬಿಕ ಬದುಕಿನಲ್ಲಿ ಅಶಾಂತಿ, ಸಾಮಾಜಿಕ ಬದುಕಿನ ಮೌಲ್ಯಗಳ ಅಭದ್ರತೆ, ರಾಷ್ಟ್ರೀಯ ಐಕ್ಯತಾ ಕೊರತೆ, ದೇವರಲ್ಲಿ ಅಪನಂಬಿಕೆ, ಅಸಹಿಷ್ಣುತೆ, ಭಯೋತ್ಪಾದನೆ, ಕೋಮುವಾದ, ಭ್ರಷ್ಟಾಚಾರ, ಮಹಿಳಾ ಅಸುರಕ್ಷತೆಯ ಈ ಸಂದರ್ಭದಲ್ಲಿ ಯೇಸುಕ್ರಿಸ್ತರ ಚಿಂತನೆಗಳನ್ನು ಜಾಗತಿಕ ಮಟ್ಟದಲ್ಲೂ ಮತ್ತೆ ಮತ್ತೆ ಅವಲೋಕಿಸಬೇಕಾದ ಜರೂರತೆ ಇದೆ.